**ಓ ಎಸ್ ನಂಃ 1002-14**
**ಪಿ ಡಬ್ಲ್ಯೂ ಃ 1**

**ದಿಃ 13-02-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಶ್ರೀ ಬಿ ವಿ ಕೆ ವಕೀಲರಿಂದ**

**34.** ನಾನು 4ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ಸರಕು ಖರೀದಿ ಇಲಾಖೆಯಲ್ಲಿ ಡಿ ಗ್ರೂಪ್ ನೌಕರನಾಗಿ ಕೆಲಸ ನಿರ್ವಹಿಸಿ ನಿವೃತ್ತಿಯಾಗಿ 17 ವರ್ಷವಾಗಿರುತ್ತದೆ. ನನಗೆ ಕನ್ನಡ ಓದಲು ಬರುತ್ತದೆ. ನಿಪಿ 28ರಲ್ಲಿ ಗಂಗಯ್ಯನ ಮಗ ಗುಜ್ಜಾರಯ್ಯ ಎಂದು ತೋರಿಸಿದ್ದು ಗಂಗಯ್ಯರವರಿಗೆ 1ನೇ ಚಿಕ್ಕಗುಜ್ಜಾರಯ್ಯ ಮತ್ತು 2ನೇ ಕರೇಹನುಮಯ್ಯ ಎನ್ನುವ ಇಬ್ಬರು ಮಕ್ಕಳು ಇರುತ್ತಾರೆ. ಗಂಗಯ್ಯನ 2ನೇ ಮಗನ ಹೆಸರು ಚಿಕ್ಕಗುಜ್ಜಾರಿ ಉರುಫ್ ಕರೇಹನುಮಯ್ಯ ಎಂದು ನುಡಿಯುತ್ತಾರೆ. ನಾನು ನಿಪಿ 28 ಮತ್ತು 29ರಲ್ಲಿ ಚಿಕ್ಕ ಗುಜ್ಜಾರಯ್ಯ ಎಂದು ಎಲ್ಲೂ ಬರೆಸಿರುವುದಿಲ್ಲ ಎಂದರೆ ತಪ್ಪಾಗಿರುತ್ತದೆ ಎಂದು ನುಡಿಯುತ್ತಾರೆ. ನಿಪಿ 28 ಮತ್ತು 29ರಲ್ಲಿ ಕರೇಹನುಮಯ್ಯ ಉರುಫ್ ಚಿಕ್ಕಗುಜ್ಜಾರಿ ಎಂದು ಎಲ್ಲೂ ನಮೂದಾಗಿರುವುದಿಲ್ಲ ಎಂದರೆ ಸಾಕ್ಷಿಯು ವಂಶವೃಕ್ಷದಲ್ಲಿ ಬಿಟ್ಟಿರುತ್ತಾರೆ ಎಂದು ನುಡಿಯುತ್ತಾರೆ.

**35.** ಚಿಕ್ಕಗುಜ್ಜಾರಯ್ಯರವರ 3ನೇ ಮಗನ ಹೆಸರು ಗುಜ್ಜಾರಯ್ಯ ನಿಪಿ 29ರಲ್ಲಿ ತೋರಿಸಲಾಗಿರುತ್ತದೆ ಎಂದರೆ ಸರಿ. ಸದರಿ ನಿಪಿ 29ರಲ್ಲಿ ಗುಜ್ಜಾರಯ್ಯರವರಿಗೆ ಗಂಡು ಸಂತಾನವಿರುವುದಿಲ್ಲ ಮತ್ತು ಅವರಿಗೆ ಇಬ್ಬರು ಹೆಂಡತಿಯರು ಎಂದು ಬರೆಸಿರುತ್ತೇನೆ ಎಂದರೆ ಸರಿ. ಗುಜ್ಜಾರಯ್ಯರವರ ಮೊದಲನೇ ಹೆಂಡತಿಯ ಹೆಸರು ಮುತ್ತಮ್ಮ ಮತ್ತು 2ನೇ ಹೆಂಡತಿಯ ಹೆಸರು ರಂಗಮ್ಮ ಆಗಿರುತ್ತದೆ. ಪ್ರತಿವಾದಿ 7 ರಿಂದ 14ರವರು ಸದರಿ ರಂಗಮ್ಮನ ಮೊದಲನೇ ಮಗಳು ಹನುಮಕ್ಕನ ಮಕ್ಕಳು ಎಂದರೆ ಸರಿ. ಗಂಗಯ್ಯನ ಮಕ್ಕಳು ಗುಜ್ಜಾರಯ್ಯ ಮತ್ತು ಕರೇಹನುಮಯ್ಯ ಬಹಳ ವರ್ಷಗಳ ಹಿಂದೆ ವಿಭಾಗ ಮಾಡಿಕೊಂಡಿರುತ್ತಾರೆ ಎಂದು ನಾನು ನನ್ನ ಮುಖ್ಯವಿಚಾರಣೆ ಪ್ರಮಾಣ ಪತ್ರ ಹಾಗೂ ವಾದ ಪತ್ರದಲ್ಲಿ ಹೇಳಿರುತ್ತೇನೆ ಎಂದರೆ ಸುಳ್ಳು. ನಾನು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಮತ್ತು ವಾದಪತ್ರದಲ್ಲಿ ಕರೇಹನುಮಯ್ಯ ಮತ್ತು ಅವರ ಮಗ ಗಾಳಿಹನುಮಯ್ಯರವರು ವಿಭಾಗವಾದ ನಂತರ ಪ್ರತ್ಯೇಕವಾಗಿ ಸ್ವತ್ತುಗಳನ್ನು ಸಂಪಾದಿಸಿರುತ್ತಾರೆ ಎಂದು ಹೇಳಿರುತ್ತೇನೆ ಎಂದರೆ ಸುಳ್ಳು.

**36.** ನಾನು ನಿಪಿ 1ರ ಅಸಲು ಪ್ರತಿಯನ್ನು ನ್ಯಾಯಾಲಯಕ್ಕೆ ಕೊಟ್ಟಿರುವುದಿಲ್ಲ ಎಂದರೆ ಸುಳ್ಳು ಕೊಟ್ಟಿರುತ್ತೇನೆ. ನಾನು ಅಸಲಿ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಕೊಟ್ಟಿರುವುದಿಲ್ಲ ಸುಳ್ಳು ಸಾಕ್ಷಿಯನ್ನು

ನುಡಿಯುತ್ತಿದ್ದೇನೆ ಎಂದರೆ ಸುಳ್ಳು. ನಿಪಿ 1ರ ಪ್ರಕಾರ ಯಾರು ಯಾರಿಗೆ ಕ್ರಯಕ್ಕೆ ಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು ವೆಂಕಟೇಶಯ್ಯರವರು ಕರೇಹನುಮಯ್ಯರವರಿಗೆ ಮಾರಾಟ ಮಾಡಿರುವ ಪತ್ರವಾಗಿರುತ್ತದೆ ಎಂದು ನುಡಿಯುತ್ತಾರೆ. ನಿಪಿ 1ರಲ್ಲಿ ಸರ್ವೆ ನಂ 27/2 ನ್ನು ಕರೇಹನುಮಯ್ಯರವರು ಖರೀದಿ ಮಾಡಿರುತ್ತಾರೆ. ಅದರ ವಿಸ್ತೀರ್ಣ 2 ಎಕರೆ ಇರುತ್ತದೆ. ನಾನು ಸರ್ವೆ ನಂ 16/1, 16/2, 16/3, ಮತ್ತು ಸರ್ವೆ ನಂ 16/18ರ ಮಾಲೀಕತ್ವವನ್ನು ದೃಢೀಕರಿಸಲು ನ್ಯಾಯಾಲಯದಲ್ಲಿ ಕೇಳಿರುತ್ತೇನೆ ಎಂದರೆ ಸರಿ. ಸರ್ವೆ ನಂ 16/2ರ ಪಹಣಿ ನಿಪಿ 2ರಲ್ಲಿ ಶ್ರೀಮತಿ ಹಳ್ಳಮ್ಮ ಕೋಂ ಹೊನ್ನಯ್ಯ ರವರ ಹೆಸರು ನಮೂದಾಗಿರುತ್ತದೆ ಎಂದರೆ ಸುಳ್ಳು. ನಿಪಿ 3ರಂತೆ ಸರ್ವೆ ನಂ 16/2ರ ಪಹಣಿಯಲ್ಲಿ ಯು.ಗುಜ್ಜಾರಯ್ಯರವರ ಹೆಸರಿಗೆ ಪಹಣಿಯಲ್ಲಿ ಕ್ರಯದ ಮೂಲಕ ಬಂದಿರುತ್ತದೆ ಎಂದು ತೋರಿಸಲಾಗಿರುತ್ತದೆ ಎಂದರೆ ಸುಳ್ಳು. ನಾನು ಕೊಟ್ಟಿರುವ ನಿಪಿ 4ರ ಪ್ರಕಾರ ಸರ್ವೆ ನಂ 16/1ರ ಖಾತೆದಾರರು ಮುತ್ತಮ್ಮ ಮತ್ತು ರಂಗಮ್ಮ ಎಂದರೆ ಸುಳ್ಳು. ನಿಪಿ 5 ಮತ್ತು 6ರಲ್ಲಿ ಯು.ಗುಜ್ಜಾರಯ್ಯರವರ ಹೆಸರಿನಲ್ಲಿ ಕ್ರಯ ಎಂದು ತೋರಿಸಲಾಗಿರುತ್ತದೆ ಎಂದರೆ ಸುಳ್ಳು. ನಿಪಿ 7ರಲ್ಲಿ ಪ್ರತಿವಾದಿ 8 ಮತ್ತು 9ರವರ ಹೆಸರಿನಲ್ಲಿ ಪಹಣಿ ಇರುತ್ತದೆ ಎಂದರೆ ಸುಳ್ಳು. ಯು.ಗುಜ್ಜಾರಯ್ಯರವರು ಮರಣ ಹೊಂದಿದ ನಂತರ ಅವರ ಹೆಂಡತಿ ಮುನಿಯಮ್ಮರವರ ಹೆಸರಿಗೆ ಖಾತೆಯಾಗಿರುತ್ತದೆ ಎಂದರೆ ಸುಳ್ಳು. ನಿಪಿ 9ರಲ್ಲಿ ಸರ್ವೆ ನಂ 16/3 ರಲ್ಲಿ ಪ್ರತಿವಾದಿ 11ರವರ ಹೆಸರು ತೋರಿಸಲಾಗಿರುತ್ತದೆ ಎಂದರೆ ಸುಳ್ಳು.

37. ನಿಪಿ 10ನ್ನು ಯಾವ ಉದ್ದೇಶಕ್ಕೆ ನ್ಯಾಯಾಲಯಕ್ಕೆ ಕೊಟ್ಟಿರುತ್ತೇನೆ ಎಂದರೆ ಬೇರೆ ಬೇರೆ ನಂಬರ್ ಗಳನ್ನು ಸೇರಿಸಿರುತ್ತಾರೆ ಎಂದು ನುಡಿಯುತ್ತಾರೆ. ನಿಪಿ 11ರಲ್ಲಿ ತೋರಿಸಲಾದಂತಹ ಜಮೀನು ನನ್ನ ಸ್ವಯಾರ್ಜಿತ ಆಸ್ತಿಯಾಗಿರುತ್ತದೆ. ನಾನು ದಾವೆಯಲ್ಲಿ ಸರ್ವೆ ಸ್ಕೆಚ್ ಗಳನ್ನು ಯಾವ ಯಾವ ಜಮೀನಿನಲ್ಲಿ ಯಾರು ಯಾರು ಇರುತ್ತಾರೆ ಮತ್ತು ಎಲ್ಲಿ ಇರುತ್ತದೆ ಎಂದು ತೋರಿಸಲು ನೀಡಿರುತ್ತೇನೆ. ನಿಪಿ14ರಲ್ಲಿ ತೋರಿಸಲಾದಂತಹ ಶ್ರೀ ಕರೇಹನುಮಯ್ಯ ಬಿನ್ ಗುಜ್ಜಾರಿ ಯಾರು ಎಂದು ನನಗೆ ಗೊತ್ತಿರುವುದಿಲ್ಲ. ನಿಪಿ 14 ಸರ್ವೆ ನಂ 16ಕ್ಕೆ ಸಂಬಂದಪಟ್ಟಿರುತ್ತದೆ ಎಂದರೆ ಸರಿ. ನಾನು 14 ರಿಂದ 26ರವರೆಗೂ ಸರ್ವೆ ನಂ 16ಕ್ಕೆ ಸಂಬಂದಪಟ್ಟ ದಾಖಲಾತಿಯನ್ನು ಹಾಜರುಪಡಿಸಿರುತ್ತೇನೆ ಎಂದರೆ ಸರಿ. ನಿಪಿ 14ರ ಪ್ರಕಾರ ಮುತ್ತಮ್ಮ ಮತ್ತು ರಂಗಮ್ಮರವರು ಸ್ವಾಧೀನದಲ್ಲಿರುತ್ತಾರೆ ಎಂದು ತೋರಿಸಲಾಗಿರುತ್ತದೆ ಎಂದರೆ ಸುಳ್ಳು. ಅದೇ ರೀತಿ 2ನೇ ಪೋಡಿಯಲ್ಲಿ ರಂಗಯ್ಯ ಬಿನ್ ಗುಜ್ಜಾರಯ್ಯರವರ ಹೆಸರಿನಲ್ಲಿ ತೋರಿಸಲಾಗಿರುತ್ತದೆ ಎಂದರೆ ಸುಳ್ಳು. ಅದೇ ರೀತಿ 3ನೇ ಪೋಡಿಯಲ್ಲಿ ಮುತ್ತಮ್ಮ ಬಿನ್ ರಂಗಮ್ಮರವರ ಹೆಸರು ತೋರಿಸಲಾಗಿರುತ್ತದೆ ಎಂದರೆ ಸುಳ್ಳು. ಅದೇ ರೀತಿ 18ನೇ ಪೋಡಿಯಲ್ಲಿ ಮುತ್ತಮ್ಮ ಬಿನ್ ರಂಗಮ್ಮರವರ ಹೆಸರು ತೋರಿಸಲಾಗಿರುತ್ತದೆ ಎಂದರೆ ತಪ್ಪು. ಅದೇ

ರೀತಿ 18 ನೇ ಪೋಡಿಯಲ್ಲಿ ಮುತ್ತಮ್ಮ ಮತ್ತು ರಂಗಮ್ಮನ ಹೆಸರಿನ ಬದಲಾಗಿ ಗಾಳಿಹನುಮಯ್ಯ ಬಿನ್ ಕರೇಹನುಮಯ್ಯ ಎಂದು ತೋರಿಸಲಾಗಿರುತ್ತದೆ ಎಂದರೆ ಸುಳ್ಳು. ಸರ್ವೆ ನಂ 16 ರ ಪೂರ್ವ ಚಾಲ್ತಿ ನಂಬರ್ ಸರ್ವೆ ನಂ 29 ಎಂದು ನಾನು ಕೊಟ್ಟಿರುವ ದಾಖಲಾತಿಗಳು ಹೇಳುತ್ತದೆ ಎಂದರೆ ಸುಳ್ಳು. ನಿಪಿ 14 ರಿಂದ 29 ದಾಖಲಾತಿಗಳು ಪೂರ್ವ ಸರ್ವೆ ನಂ 29 ಮತ್ತು ಹಾಲಿ ಸರ್ವೆ ನಂ 16 ಕ್ಕೆ ಸಂಬಂದಪಟ್ಟ ದಾಖಲಾತಿಗಳು ಎಂದರೆ ಸುಳ್ಳು. ಪೂರ್ವ ಸರ್ವೆ ನಂ 27 ಹಾಲಿ ಸರ್ವೆನಂ 16 ಕ್ಕೆ ಸಂಬಂದಪಟ್ಟಿರುತ್ತದೆ ಎಂದು ತೋರಿಸಲು ನಾನು ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸುಳ್ಳು. ಸಾಕ್ಷಿಗೆ ಈಗ ಒಂದು ಸರ್ವೆ ದಾಖಲಾತಿಯನ್ನು ತೋರಿಸಲಾಗಿ ಅದರಲ್ಲಿ ಸಾಕ್ಷಿ ಸರ್ವೆ ನಂ 27 ಕ್ಕೆ ಸಂಬಂದಪಟ್ಟ ದಾಖಲಾತಿ ಆಗಿರುತ್ತದೆ ಎಂದು ಗುರುತಿಸಿದ್ದರ ಮೇರೆಗೆ ಅದನ್ನು ನಿಡಿ 1 ಎಂದು ಗುರುತಿಸಲಾಯಿತು. ದಿನಾಂಕಃ 09-11-2007 ರಲ್ಲಿ ನಾನು ಮತ್ತು ನನ್ನ ಕುಟುಂಬದವರು ಸರ್ವೆ ನಂ 13/9 ನ್ನು ಮಾರಾಟ ಮಾಡಿರುತ್ತೇವೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಸರ್ವೆ ನಂ 13/9 ರಲ್ಲಿ 2 ಎಕರೆ 24 ಗುಂಟೆ ಇದ್ದು ಅದರಲ್ಲಿ ನಾನು 32 ಗುಂಟೆ ಜಮೀನನ್ನು ಮಾರಾಟಮಾಡಿರುತ್ತೇನೆ ಮತ್ತು ಇನ್ನುಳಿಕೆ ಜಮೀನು ಬರುವುದು ಬಾಕಿ ಇರುತ್ತದೆ. ನಾನು ಸರ್ವೆ ನಂ 13/9 ನ್ನು ಪ್ರಸ್ತುತ ದಾವೆಯಲ್ಲಿ ಸೇರಿಸಿರುತ್ತೇನೆ. ನಾನು ಜಮೀನನ್ನು ಮಾರಾಟ ಮಾಡಿರುವ ಖರೀದಿದಾರರಾದ ಮಹೇಶ್ ಗೌಡರವರನ್ನು ಪ್ರಸ್ತುತ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. **ಈ ಹಂತದಲ್ಲಿ ಪಾಟೀ ಸವಾಲು ಮುಂದುವರೆಸಲು ಕಾಲವಕಾಶ ಕೋರಿದ್ದಾರೆ ನೀಡಲಾಗಿದೆ.**

**(ಉಖ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಮಾಗಡಿ.**